

ಅದಾದ ಕೆಲ ವರುಷಗಳ ನಂತರ ಧಾರವಾಡದಲ್ಲಿ 'ಸದಾನಂದಿ ಜಂಗಮ' ಅವರು 'ಸ್ವಧರ್ಮ' ಪತ್ರಿಕೆಯಲ್ಲಿ (1926) 'ಮೂಡಲ ಮನೆಯ ಮುತ್ತಿನ ನೀರಿನ ಎರಕವ ಹೊಯ್ದ' ಎಂದು ಆರಂಭವಾಗುವ 'ಬೆಳಗು' ಕವಿತೆಯನ್ನು ಪ್ರಕಟಿಸಿದರು.

ಮಾಸ್ತಿಯವರು (ಮಾಸ್ತಿ ವೆಂಕಟೇಶ್ ಅಯ್ಯಂಗಾರ್ (1891 –1986) ತಮ್ಮ ಆತ್ಮಕತೆ 'ಭಾವ'ದ ಎರಡನೇ ಸಂಪುಟದಲ್ಲಿ 1927ರಲ್ಲಿ 'Recent Trends in Kannada Literature' ಎಂಬ ಎರಡು ಉಪನ್ಯಾಸ ನೀಡಿದ ಸಂಗತಿಯನ್ನು ಪ್ರಸ್ತಾಪಿಸುತ್ತಾರೆ. ಎರಡನೇ ಉಪನ್ಯಾಸದಲ್ಲಿ ಕಾವ್ಯದ ವಿಷಯವಾಗಿ ಮಾತನಾಡುತ್ತ, 'ನಾನು 'ಜಯಕರ್ನಾಟಕ' ಪತ್ರಿಕೆಯಲ್ಲಿ (ವಾಸ್ತವವಾಗಿ ಅದು 'ಸ್ವಧರ್ಮ') ಬಂದಿದ್ದ 'ಬೆಳಗು' ಎಂಬ ಒಂದು ಪದ್ಯವನ್ನೂ, ಎಂಟೇ ಪಂಕ್ತಿಯ ಬಹುಸಣ್ಣ ಒಂದು ಪದ್ಯವನ್ನೂ ಓದಿ ಹೇಳಿದೆನು. ಇದನ್ನು ಬರೆದ ಕವಿಗಳು ತಮ್ಮ ಹೆಸರನ್ನು ಕೊಟ್ಟಿಲ್ಲ. ಆದರೆ, ಇದನ್ನು ನೋಡಿದರೆ ಇಬ್ಬರೂ ಸಮರ್ಥರಾದ ಕವಿಗಳೆನ್ನುವುದು ವ್ಯಕ್ತವಾಗುತ್ತದೆ. ಮೊದಲನೆಯ ಪದ್ಯದಲ್ಲಿ (ಬೆಳಗು) ಕಾಣುವ ಊಹೆಯ ಶಕ್ತಿ ಅತ್ಯುನ್ನತ ಮಟ್ಟದ್ದು. ಎರಡನೆಯ ಕವಿತೆಯ ಭಾವ ಬಹು ಸುಂದರವಾದದ್ದು, ಬಹು ಉಚಿತವಾದ ಭಾಷೆಯಲ್ಲಿ ಬಂದಿದೆ ಎಂದು ಬಣ್ಣಿಸಿದೆನು. ಆಮೇಲೆ ಬಹುದಿನಗಳ ನಂತರ ನನಗೆ ಮೊದಲ ಪದ್ಯದ ಕವಿ ಶ್ರೀ ಬೇಂದ್ರೆಯವರು ಬರೆದದ್ದು ಎನ್ನುವುದು ತಿಳಿಯಿತು. ಕೆಲವು ತಿಂಗಳ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಒಂದು ಉತ್ಸವದಲ್ಲಿ, ಅಂದು ಒಂದು ಬಹುಮಾನವನ್ನು ಪಡೆದ ಶ್ರೀ ತೀ. ನಂ. ಶ್ರೀಕಂಠಯ್ಯನವರು ನನ್ನ ಉಪನ್ಯಾಸದಲ್ಲಿ ಹೊಗಳಿದ್ದ ಎರಡನೆಯ ಪದ್ಯವನ್ನು ಬರೆದ ಕವಿ ಎಂದು ಮಿತ್ರರು ನನಗೆ ಅವರ ಪರಿಚಯ ಮಾಡಿಕೊಟ್ಟರು' (ಪುಟ 248) ಎಂದು ಉಲ್ಲೇಖಿಸಿದ್ದಾರೆ.

ಬಿಡಿಯಾಗಿ ಪ್ರಕಟವಾಗಿದ್ದ 'ಸದಾನಂದಿ ಜಂಗಮ'ರ 'ಬೆಳಗು' ಕವಿತೆಯು 'ಗರಿ'ಯಲ್ಲಿ (1932)ರಲ್ಲಿ 'ಅಂಬಿಕಾತಯದತ್ತ'ರದಾಯಿತು. ಈ ಕವಿತೆ ಬರೆದ ಕಾಲ ಯಾವುದೆಂದು ಬೇಂದ್ರೆಯವರು ಖಚಿತವಾಗಿ ತಿಳಿಸಿಲ್ಲ. ಆದರೆ, 'ಗರಿ' ಮುನ್ನುಡಿಯಲ್ಲಿ 'ಈ ಕಾವ್ಯಮಾಲೆಯೊಳಗಿನ ನನ್ನ ಕವನಗಳು ಇ.ಸ. 1918– 1932ರವರೆಗೆ ಎಂದರೆ ಹೋದ ಹದಿನಾಲ್ಕು ವರ್ಷಗಳಲ್ಲಿ ಬರೆದವುಗಳು. ಎರಡು–ಮೂರು ಕವನಗಳನ್ನು ಬಿಟ್ಟು ಉಳಿದೆಲ್ಲವೂ ಬರೆದ ಕಾಲದ ಕ್ರಮದಲ್ಲಿಯೇ ಪ್ರಕಟವಾಗಿವೆ. ಇವುಗಳಲ್ಲಿ ಎಷ್ಟೋ ಈ ಮೊದಲೇ ಮಾಸಪತ್ರಿಕೆಯಲ್ಲಿ ಬೆಳಕು ಕಂಡಿದ್ದವು' ಎಂದು ಉಲ್ಲೇಖಿಸಿದ್ದರು. ಈ ಆಧಾರದ ಮೇಲೆಯೇ ಚೆನ್ನವೀರ ಕಣವಿ (1928-2022) ಅವರು, ಬೇಂದ್ರೆಯವರ 'ಬೆಳಗು' ಕವಿತೆಗೆ ಈಗ ನೂರು ವರುಷ ಎಂಬ ಲೇಖನವನ್ನು 'ಹೊಸತು' ಮಾಸಪತ್ರಿಕೆಯಲ್ಲಿ (1918) ಪ್ರಕಟಿಸಿದ್ದರು. ಆ ಲೇಖನದಲ್ಲಿ ಕಣವಿಯವರು 1919ರಲ್ಲಿ ಧಾರವಾಡದ 'ಸ್ವಧರ್ಮ' ಪತ್ರಿಕೆಯಲ್ಲಿ ಪ್ರಕಟವಾಯಿತು' ಎಂದು ಉಲ್ಲೇಖಿಸಿದ್ದರು. ಆದರೆ, ಬೇಂದ್ರೆಯವರು ಸಂಪಾದಕರಾಗಿದ್ದ